ಉತ್ತರ ಕೊಟ್ಟಿದ್ದಾರೆ. ಅದಕ್ಕೊಸ್ಕರ ಸರ್ಕಾರವನ್ನು ಅಭಿನಂದಿಸುತ್ತೇನೆ. ದಿನವೂ ಸಹ ಇದೇ ರೀತಿ ಇರಬೇಕು.

ಶರಾವತಿ ಮುಳುಗಡೆ ಪ್ರದೇಶದಲ್ಲಿ ಮರಗಳು ನೀರಿನಲ್ಲಿ ನಿಂತು ಕೊಳೆತು ಹಾಳಾಗಿರುವುದು

೧೦೯೨. ಶ್ರೀ ಬಿ ಧರ್ಮಪ್ಪ (ಸಾಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಶರಾವತಿ ಮುಳುಗಡೆ ಪ್ರದೇಶದಲ್ಲಿ ೧೯೬೫ನೇ ಇಸವಿಯಿಂದಲೂ ಕೋಟ್ಯಾಂತರ ಬೆಲೆ ಬಾಳುವ ಮರಗಳು ನೀರಿನಲ್ಲಿದ್ದು ಒಣಗಿ ಹಾಗೂ ಕೊಳೆತು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ;

(ಆ) ಸಾಗರ ತಾಲ್ಲೂಕಿನಿಂದ ಹೊಸನಗರ ತಾಲ್ಲೂಕಿನವರೆಗೆ ನೀರು ನೂರಾರು ಕಣಿವೆಗಳಲ್ಲಿ ನಿಂತಿದ್ದು ಒಂದೊಂದು ಕಣಿವೆಯಲ್ಲಿಯೂ (ತೋಪು) ೨೦ ಲಕ್ಷ ರೂಪಾಯಿಗಳಿಗೆ ಕಡಿಮೆ ಇಲ್ಲದಷ್ಟು ನಾಟ ಮತ್ತು ಕಟ್ಟಿಗೆ ಒಣಗಿ ನಿಂತಿದ್ದು ಈಗಾಲೂ ಅವುಗಳನ್ನು ತೆಗೆಸಿ ಬಳಕೆಗೆ ಬೇಸಿಗೆ ಕಾಲದಲ್ಲಿ ಆ ಮರಗಳನ್ನು ಕಡಿದು ಸಾಗಿಸುವುದು ತುಂಬಾ ಸುಲಭ ಕೆಲಸವಾಗಿದ್ದು ಸ್ಥಳೀಯ ಜನರಿಗೆ ಅನುಮತಿ ನೀಡಿ ಪುಕ್ಕಟೆಯಾಗಿ ಮನೆ ಕಟ್ಟುವವರಿಗೆ ವಿತರಣೆ ಮಾಡಲು ಸರ್ಕಾರದವರು ಯೋಚಿಸಿದ್ದಾರೆಯೇ ;

(ಇ) ಹಾಗಿದ್ದಲ್ಲಿ ಈಗಲಾದರೂ ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಜೆ. ಎಸ್. ಬಾಗಲಕೋಟೆ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಈ ಪ್ರದೇಶದಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಮರಗಳು ಇವೆ ಹಾಗೂ ಅವು ಒಣಗಿ ಕೊಳೆತಂ ಹಾಳಾಗಿವೆ ಎನ್ನುವುದು ಸರಿಯಲ್ಲ

ಶರಾವತಿ ಮುಳುಗಡೆಯಂ ಜಲಾನಯನದ ಇಳಿಜಾರಾದ ಕಣಿವೆ ಪ್ರದೇಶದ ಭೂಸಾರ ಸಂರಕ್ಷಣೆ ಗೋಸ್ಕರ ಹಿಂದೆ ಕಡಿಯದೆ ಉಳಿಸಿಕೊಂಡ ಮರಗಳ ವಿಷಯ ಗಮನಕ್ಕೆ ಬಂದಿದೆ.

ಇದಲ್ಲದೆ, ಹಿಂದೆ ಮುಳುಗಡೆ ಪ್ರದೇಶದಲ್ಲಿನ ಎಲ್ಲಾ ಮರಗಳನ್ನು ಮಾರಾಟ ಮಾಡಿದ್ದು ಖರೀದಿದಾರರು, ತಮಗೆ ಬೇಡವೆಂದು ಬಿಟ್ಟುಹೋಗಿರುವ ಕೆಲವು ಮರಗಳು ಇವೆ.

(ಆ) ಇಂತಹ ಮರಗಳನ್ನು ಏಣಿಕೆ ಮಾಡಿ ಉಪಯೋಗವಾಗುವ ಮರವನ್ನು ಕಡಿದು ಸಾಗಿಸುವ ಮರವನ್ನು ಕಡಿದು ಸಾಗಿಸುವ ಕಾರ್ಯಕ್ರಮ ಇಟ್ಟುಕೊಂಡಿದೆ. ಇಂತಹ ನಾಟಾಗಳನ್ನು ಮನೆ ಕಟ್ಟುವವರಿಗೆ ಪುಕ್ಕಟೆಯಾಗಿ ವಿತರಣೆ ಮಾಡುವ ಯೋಜನೆ ಇಲ್ಲ.

(ಇ) ಆಗಾಗ್ಗೆ ಜಲಾನಯನದಲ್ಲಿ ನೀರು ಕಡಿಮೆಯಾದಾಗ ಈ ನಿಂತ ಮರಗಳನ್ನು ಇಲಾಖೆಯಿಂದ ಕಡಿಯುವ ಕ್ರಮ ನಡೆದೇ ಇದೆ.

ವನ್ಯ ಮೃಗಗಳಿಂದ ರೈತರಿಗೆ ಆಗುತ್ತಿರುವ ತೊಂದರೆ

೧೦೯೩. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸಾಗರ ತಾಲ್ಲೂಕಿನ ಗ್ರಾಮಗಳಲ್ಲಿ ತೆಂಗು, ಅಡಿಕೆ, ಭತ್ತ, ಮೆಣಸು, ಭಾಳೆ ಮುಂತಾದ ಬೆಳೆಗಳನ್ನು ಕಾಡು ಹಂದಿಗಳು ನಾಶ ಮಾಡುತ್ತಿದ್ದು ಅರಣ್ಯ ಇಲಾಖೆಯವರು ಪರಿಹಾರ ಕೊಡಲಾಗುವುದಿಲ್ಲವೆಂದು ತಿಳಿಸಿರುವುದು ನಿಜವೆ ?

(ಆ) ಹಾಗಿದ್ದಲ್ಲಿ ಹಾನಿಗೊಳಗಾದ ರೈತರ ಬೆಳೆಗಳಿಗೆ ಸರ್ಕಾರದವರು ಪರಿಹಾರ ಒದಗಿಸುವರೆ ?

ಶ್ರೀ ಜೆ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಹೌದು.

(ಅ) ಸರ್ಕಾರದ ಆದೇಶ ಸಂಖ್ಯೆ : ಎಫ್‌ಎಫ್‌ಡಿ ೫೫ ಎಫ್‌ಡಬ್ಲ್ಯೂಎಲ್ ೮೧, ದಿನಾಂಕ ೧೩-೧೧-೧೯೮೧ರ ಪ್ರಕಾರ ಕಾಡು ಹಂದಿಗಳಿಂದ ನಷ್ಟ ಉಂಟಾದಲ್ಲಿ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ.

ರಾಜ್ಯದಲ್ಲಿ ಗಂಧದ ಮರಗಳ ಕಳ್ಳ ಸಾಗಣೆ ಕಂಡಿತು

೧೧೯೫. ಶ್ರೀ ಬಿ. ರಾಜೂಗೌಡ (ಹನೂರು) —ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧-೪-೧೯೮೬ ರಿಂದ ೩೧-೧೨-೧೯೮೭ರ ವರೆವಿಗೆ ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಗಂಧದ ಮರಗಳನ್ನು ಕದ್ದು ಸಾಗಿಸುವಾಗ ಅರಣ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿ ವರ್ಗದವರು ವಶಪಡಿಸಿಕೊಂಡಿದ್ದಾರೆ ?

(ಆ) ಈ ಸಂಬಂಧದಲ್ಲಿ ವಶಪಡಿಸಿಕೊಂಡ ವಾಹನಗಳ ವಿವರಗಳೇನು ?

(ಇ) ಎಷ್ಟು ಪ್ರಕರಣಗಳಲ್ಲಿ ಅಪರಾಧಿಗಳು ಪತ್ತೆಯಾಗಿದ್ದಾರೆ ಹಾಗೂ ಶಿಕ್ಷೆಯಾಗಿರುವ ಪ್ರಕರಣಗಳೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟಿ (ಅರಣ್ಯ ರಾಜ್ಯ ಮಂತ್ರಿಗಳು).—

(ಅ) ಮತ್ತು (ಆ) ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ಪಡಿಸಿದೆ.

(ಇ) ಶ್ರೀಗಂಧ ಕಳ್ಳಸಾಗಾಣಿಕೆ ಪ್ರಕರಣಗಳಲ್ಲಿ ನಿರತರಾಗಿದ್ದ ೧,೧೨೬ ಅಪರಾಧಿಗಳನ್ನು ಬಂಧಿಸಲಾಗಿದ್ದು ಅವರಲ್ಲಿ ೩೩ ಅಪರಾಧಿಗಳಿಗೆ ಶಿಕ್ಷೆ ವಿಧಿಸಲಾಗಿದೆ (ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದ ಪಟ್ಟಿಯಲ್ಲಿ ನಮೂದಿಸಿದೆ.)